ಕರ್ನಾಟಕ ಸರ್ಕಾರ

# ಕಾಲೇಜು ಶಿಕ್ಷಣ ಆಯುಕ್ತರ ಕಛೇರಿಯ ನಡಾವಳಿಗಳು

ವಿಷಯ: ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳಲ್ಲಿ ಕಾರ್ಯಭಾರವಿಲ್ಲದ ಮನಃಶಾಸ್ತ್ರ ವಿಷಯದ ಖಾಲಿಹುದ್ದೆಗಳನ್ನು ಸಸ್ಯಶಾಸ್ತ್ರ ಮತ್ತು ಪ್ರಾಣಿಶಾಸ್ತ್ರ ವಿಷಯಗಳಿಗೆ ಪರಿವರ್ತಿಸಿ ಕಾರ್ಯಭಾರವಿರುವ ಕಾಲೇಜುಗಳಿಗೆ ಸ್ಥಳಾಂತರಿಸುವ ಬಗ್ಗೆ.

ಉಲ್ಲೇಖ: ಸರ್ಕಾರದ ಅಧಿಸೂಚನೆ ಸಂ: ಇಡಿ 151 ಡಿಸಿಇ 2020. ದಿ:29.01.2021. ರಂತೆ ಅಧಿಸೂಚಿಸಲಾದ ಕಾಲೇಜು ಶಿಕ್ಷಣ ಇಲಾಖೆಯ ಬೋಧಕರ ವರ್ಗಾವಣೆ ನಿಯಮಗಳು-2021.

** ** **

**ಪ್ರಸ್ತಾವನೆ :**

ಕಾಲೇಜು ಶಿಕ್ಷಣ ಇಲಾಖೆಯಡಿಯಲ್ಲಿ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಕೊರತೆಯಿಂದ ಅಗತ್ಯ ಕಾರ್ಯಭಾರವಿಲ್ಲದಿರುವ ಬೋಧಕರ ಹುದ್ದೆಗಳನ್ನು ಹೆಚ್ಚುವರಿ ಕಾರ್ಯಭಾರವಿರುವ ಕಾಲೇಜುಗಳಿಗೆ ಸ್ಥಳಾಂತರ ಮಾಡುವ ಬಗ್ಗೆ ಕಾಲೇಜು ಶಿಕ್ಷಣ ಇಲಾಖೆಯ ಬೋಧಕರ ವರ್ಗಾವಣೆಯನ್ನು ನಿಯಂತ್ರಿಸುವ ಸಲುವಾಗಿ ರೂಪಿಸಿರುವ ಕರ್ನಾಟಕ ನಾಗರೀಕ ಸೇವೆಗಳು (ಕಾಲೇಜು ಶಿಕ್ಷಣ ಇಲಾಖೆಯ ಬೋಧಕರ ವರ್ಗಾವಣೆ ನಿಯಂತ್ರಣ) ನಿಯಮಗಳು-2021ರ ನಿಯಮ 3ರಲ್ಲಿ ತಿಳಿಸಲಾಗಿರುತ್ತದೆ.

ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯ 16 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಮಂಜೂರಾಗಿ ಪ್ರಸ್ತುತ ಖಾಲಿಯಿರುವ 19 ಮನಃಶಾಸ್ತ್ರ ವಿಷಯದ ಹುದ್ದೆಗಳಿಗೆ ವಿದ್ಯಾರ್ಥಿಗಳ ದಾಖಲಾತಿಯ ಕೊರತೆಯಿಂದ ಕಾರ್ಯಭಾರವಿರುವುದಿಲ್ಲ ಹಾಗೂ ಸದರಿ ಹುದ್ದೆಗಳನ್ನು ಬೇರೆ ಕಾಲೇಜುಗಳಿಗೆ ಸ್ಥಳಾಂತರಿಸಲು ಅಗತ್ಯ ಕಾರ್ಯಭಾರ ಇರುವುದಿಲ್ಲ. ಆದ್ದರಿಂದ ಪ್ರಸ್ತುತ ಖಾಲಿಯಿರುವ 19 ಮನಃಶಾಸ್ತ್ರದ ಹುದ್ದೆಗಳನ್ನು ಕ್ರಮವಾಗಿ 09 ಸಸ್ಯಶಾಸ್ತ್ರ ಹಾಗೂ 10 ಪ್ರಾಣಿಶಾಸ್ತ್ರ ವಿಷಯಗಳಿಗೆ ಪರಿವರ್ತಿಸಿ, ಹೆಚ್ಚುವರಿ ಕಾರ್ಯಭಾರವಿರುವ ಕಾಲೇಜುಗಳಿಗೆ ಸ್ಥಳಾಂತರಿಸಲು ಈ ಆದೇಶ

**ಆದೇಶ ಸಂಖ್ಯೆ:ಕಾಶಿಇ:07:ಹು.ಪ:2021-22:ವ&ನಿ ಬೆಂಗಳೂರು ದಿನಾಂಕ:29-06-2021**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಕಾಲೇಜು ಶಿಕ್ಷಣ ಇಲಾಖಾವ್ಯಾಪ್ತಿಯ ಕೆಳಕಂಡ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳಿಗೆ ಮಂಜೂರಾಗಿ ಪ್ರಸ್ತುತ ಖಾಲಿಯಿರುವ ಹಾಗೂ ಕಾರ್ಯಭಾರವಿಲ್ಲದ 19

ಮನಃಶಾಸ್ತ್ರ ವಿಷಯದ ಹುದ್ದೆಗಳಲ್ಲಿ 09 ಹುದ್ದೆಗಳನ್ನು ಸಸ್ಯಶಾಸ್ತ್ರ ಹಾಗೂ 10 ಹುದ್ದೆಗಳನ್ನು ಪ್ರಾಣಿಶಾಸ್ತ್ರ ವಿಷಯಕ್ಕೆ ಪರಿವರ್ತಿಸಿ ಕಾರ್ಯಭಾರವಿರುವ ಕಾಲೇಜುಗಳಿಗೆ ಸ್ಥಳಾಂತರಿಸಿ ಆದೇಶಿಸಿದೆ.

| ಕ್ರ. ಸಂ. | ಮನಃಶಾಸ್ತ್ರ ವಿಷಯದ ಖಾಲಿಹುದ್ದೆ ಲಭ್ಯವಿರುವ ಕಾಲೇಜು | ಸಸ್ಯಶಾಸ್ತ್ರ ವಿಷಯಕ್ಕೆ ಪರಿವರ್ತಿಸಲಾದ ಹುದ್ದೆ ಸಂಖ್ಯೆ | ಸ್ಥಳಾಂತರಿಸಲಾದ ಕಾಲೇಜು | ಸ್ಥಳಾಂತರಿಸಲಾದ ಹುದ್ದೆ ಸಂಖ್ಯೆ |
|---|---|---|---|---|
| 1 | ಸಪ್ರದಕಾ ತಿಪಟೂರು | 1 | ಸಪ್ರದಕಾ ತಿಪಟೂರು | 1 |
| 2 | ಮಮಕಕಾ ಮೈಸೂರು | 2 | ಸಪ್ರದಕಾ ಗಂಗಾವತಿ | 1 |
| | | | ಸಪ್ರದಕಾ ಸಿಂಧನೂರು | 1 |
| 3 | ಸಪ್ರದಮಕಾ ವಿಜಯನಗರ ಮೈಸೂರು | 1 | ಸಪ್ರದಮಕಾ ವಿಜಯನಗರ ಮೈಸೂರು | 1 |
| 4 | ಸಮಕಾ ದಾವಣಗೆರೆ | 1 | ಸಪ್ರದಕಾ ದಾವಣಗೆರೆ | 1 |
| 5 | ಸಪ್ರದಕಾ ಉಪ್ಪಿನಂಗಡಿ | 1 | ಸಮಕಾ ಸಾಗರ | 1 |
| 6 | ಸಪ್ರದಕಾ ಬಳ್ಳಾರಿ | 1 | ಸಪ್ರದಕಾ ಶಿವಮೊಗ್ಗ | 1 |
| 7 | ಸಮಕಾ ಬಲ್ಮಠ ಮಂಗಳೂರು | 1 | ಸಪ್ರದಕಾ ರಥಬೀದಿ ಮಂಗಳೂರು | 1 |
| 8 | ಸಪ್ರದಕಾ ಬಾರ್ಕೂರು | 1 | ಸಮಕಾ ಅಜ್ಜರಕಾಡು ಉಡುಪಿ | 1 |

| ಕ್ರ. ಸಂ. | ಮನಃಶಾಸ್ತ್ರ ವಿಷಯದ ಖಾಲಿಹುದ್ದೆ ಲಭ್ಯವಿರುವ ಕಾಲೇಜು | ಪ್ರಾಣಿಶಾಸ್ತ್ರ ವಿಷಯಕ್ಕೆ ಪರಿವರ್ತಿಸಲಾದ ಹುದ್ದೆ ಸಂಖ್ಯೆ | ಸ್ಥಳಾಂತರಿಸಲಾದ ಕಾಲೇಜು | ಸ್ಥಳಾಂತರಿಸಲಾದ ಹುದ್ದೆ ಸಂಖ್ಯೆ |
|---|---|---|---|---|
| 1 | ಸಪ್ರದಕಾ, ವಿಜಯನಗರ, ಬೆಂಗಳೂರು | 1 | ಸಪ್ರದಕಾ, ವಿಜಯನಗರ, ಬೆಂಗಳೂರು | 1 |
| 2 | ಸಪ್ರದಕಾ, ಕೆ.ಜಿ.ಎಫ್ | 1 | ಸಪ್ರದಕಾ, ತಿಪಟೂರು | 1 |
| 3 | ಸಮಕಾ, ಮಂಡ್ಯ | 2 | ಸಪ್ರದಕಾ, ಗಂಗಾವತಿ | 1 |
| | | | ಸಪ್ರದಕಾ, ಸಿಂಧನೂರು | 1 |

| ಕ್ರ. ಸಂ. | ಮನಃಶಾಸ್ತ್ರ ವಿಷಯದ ಖಾಲಿಹುದ್ದೆ ಲಭ್ಯವಿರುವ ಕಾಲೇಜು | ಪ್ರಾಣಿಶಾಸ್ತ್ರ ವಿಷಯಕ್ಕೆ ಪರಿವರ್ತಿಸಲಾದ ಹುದ್ದೆ ಸಂಖ್ಯೆ | ಸ್ಥಳಾಂತರಿಸಲಾದ ಕಾಲೇಜು | ಸ್ಥಳಾಂತರಿಸಲಾದ ಹುದ್ದೆ ಸಂಖ್ಯೆ |
|---|---|---|---|---|
| 4 | ಸಪ್ರದಕಾ, ಕೆ.ಆರ್ ಪೇಟೆ | 1 | ಸಮಕಾ, ಸಾಗರ | 1 |
| 5 | ಸಮಕಾ, ಹಾಸನ | 1 | ಸವಿಕಾ, ಹಾಸನ | 1 |
| 6 | ಸಪ್ರದಕಾ, ಅಜ್ಜಂಪುರ | 1 | ಸಪ್ರದಕಾ, ದಾವಣಗೆರೆ | 1 |
| 7 | ಸಪ್ರದಕಾ, ಭಟ್ಕಳ | 2 | ಸಪ್ರದಕಾ, ರಥ ಬೀದಿ ಮಂಗಳೂರು | 1 |
| | | | ಸಪ್ರದಕಾ, ಶಿವಮೊಗ್ಗ | 1 |
| 8 | ಸಪ್ರದಕಾ, ವಿಜಯಪುರ | 1 | ಸಪ್ರದಕಾ, ವಿಜಯಪುರ | 1 |

**ಆಯುಕ್ತರು**
**ಕಾಲೇಜು & ಶಿಕ್ಷಣ ಇಲಾಖೆ**

**ಇವರಿಗೆ**

1. ಮೇಲ್ಕಂಡ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಮಾಹಿತಿ ಹಾಗೂ ತುರ್ತು ಕ್ರಮಕ್ಕಾಗಿ.

**ಪ್ರತಿಯನ್ನು - ಮಾಹಿತಿಗಾಗಿ**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ಬಹುಮಹಡಿಗಳ ಕಟ್ಟಡ, ಬೆಂಗಳೂರು – ಮಾಹಿತಿಗಾಗಿ.
2. ಮಾನ್ಯ ಉಪಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ ಸಚಿವರ ಆಪ್ತಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು – ಮಾಹಿತಿಗಾಗಿ.
3. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು – ಮಾಹಿತಿಗಾಗಿ.
4. ಖಜಾನಾಧಿಕಾರಿಗಳು, ರಾಜ್ಯಹುಜೂರ್ ಖಜಾನೆ, ನೃಪತುಂಗರಸ್ತೆ, ಬೆಂಗಳೂರು- ಮಾಹಿತಿಗಾಗಿ.
5. ಇಲಾಖಾ ವ್ಯಾಪ್ತಿಯ ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ – ಮಾಹಿತಿಗಾಗಿ.
6. ಮಾಹಿತಿ ಅಧಿಕಾರಿಗಳು, ಕಾಲೇಜು ಶಿಕ್ಷಣ ಕೇಂದ್ರ ಕಚೇರಿ, ಬೆಂಗಳೂರು – ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
7. ಹೆಚ್ಚುವರಿ ಪ್ರತಿ.
8. ಕಛೇರಿ ಪ್ರತಿ.